# ಶ್ರೀಮಾತೆಯವರನ್ನು ಕುರಿತ ಕನ್ನಡ ಪ್ರಕಟಣೆಗಳು

ಡಾ. ಕೆ.ಎಲ್. ಪ್ರಸನ್ನಾಕ್ಷೀ

ಕನ್ನಡದಲ್ಲಿ ಪ್ರಕಟವಾಗಿರುವ ಶ್ರೀಮಾತೆಯವರನ್ನು ಕುರಿತ ಗ್ರಂಥಗಳು ವೈವಿಧ್ಯಮಯವಾಗಿವೆ. ಈ ಕೃತಿಗಳ ಸಮೀಕ್ಷೆ ಇಲ್ಲಿದೆ. ಲೇಖಕಿ, ಮೈಸೂರು ಮಹಾರಾಣಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರು. ಸಂಸ್ಕೃತ ಭಾಷೆ ಹಾಗೂ ಸಾಹಿತ್ಯ, ವೇದಾಂತ ಹಾಗೂ ಇನ್ನಿತರ ಆಧ್ಯಾತ್ಮಿಕ ಕೃತಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಅವರು ಮೈಸೂರು ಆಶ್ರಮದ ಭಕ್ತರು. ದೀರ್ಘಕಾಲದಿಂದ ಅವರು 'ವಿವೇಕಪ್ರಭ' ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಬರೆಯುತ್ತ ಬಂದಿದ್ದಾರೆ.

## ಪೀಠಿಕೆ

**ಭಾ**ರತದಲ್ಲಿ ಜೀವನದ ಪರಮಗುರಿ ನಮ್ಮ ಮೂಲವನ್ನು ಸೇರುವುದು, ಅಂದರೆ ದೇವತ್ವವನ್ನು ಸಾಧಿಸುವುದು. ಅದಕ್ಕೆ ಬೇಕಾದ ಬ್ರಹ್ಮಚರ್ಯ, ನಮ್ರತೆ ಸಂಯಮಶೀಲತೆ ನಿಷ್ಕಾಮ ಕರ್ಮ ಭಕ್ತಿ ಪವಿತ್ರತೆ ಮುಂತಾದವುಗಳನ್ನು ಜೀವನದಲ್ಲಿ ಗಳಿಸಬೇಕಾದ ಪರಮ ಐಶ್ವರ್ಯವೆಂದು ಭಾರತೀಯನು ಭಾವಿಸುವನು. ಇವುಗಳ ಗಳಿಕೆಯಿಂದ ದೊರಕುವ ಸುಖಕ್ಕೆ ಸಾಟಿಯಾದ ಸುಖ ಇನ್ನೊಂದಿಲ್ಲ ಎಂಬುದು ಅವನ ವಿಶ್ವಾಸ. ಇವೇ ಅವನಿಗೆ ಪರಮ ಶೋಭಾದಾಯಕವಾದ ಅನರ್ಘ್ಯ ರತ್ನಗಳ ಆಭರಣ.

## ಅವತಾರ ಸಾಹಿತ್ಯ

ಸರಿ, ಇವುಗಳನ್ನು ಗಳಿಸುವುದು ಹೇಗೆ? ಇದಕ್ಕೆ ಸಹಾಯಕವಾಗುವುದೇ ಭಗವಂತನ ಲೀಲಾವತಾರಗಳಿಗೆ ಸಂಬಂಧಿಸಿದ ಸಾಹಿತ್ಯ. ಕೇವಲ ದುಷ್ಟಶಿಕ್ಷಣ ಶಿಷ್ಟರಕ್ಷಣ ಎಂಬುದು ಅವತಾರದ ಉದ್ದೇಶವಾಗಿದ್ದರೆ ಆ ಕೆಲಸವನ್ನು ಪರಮಾತ್ಮನು ತಾನು ಇರುವ ತನ್ನ ಧಾಮ, ತನ್ನ ನೆಲೆಯಿಂದಲೇ ಸಾಧಿಸಬಲ್ಲ. ತನ್ನನ್ನು ನಂಬಿರುವ ಜೀವಿಗಳನ್ನು ಈ ಭವ (ಸಂಸಾರ-ಪ್ರಪಂಚ)ದಿಂದ ದಾಟಿಸಲಿಕ್ಕಾಗಿ (=ತಾರ) ಅವರಿರುವ ನೆಲೆಗೆ ಇಳಿದು ಬಂದು (ಅವ), ತನ್ನ ನಡೆ ಆಚಾರ-ವಿಚಾರ ಮುಂತಾದವನ್ನು ಆದರ್ಶವಾಗಿ ಅವಲಂಬನವಾಗಿ ಕೊಡುವುದು ಅವತಾರದ ಪರಮ ಉದ್ದೇಶ. ಈ 'ಅವತಾರ'ಗಳ ಲೀಲಾವಿಹಾರಾದಿಗಳನ್ನು ಕಣ್ಮನಗಳಲ್ಲಿ ತುಂಬಿಕೊಳ್ಳುವುದರ ಮೂಲಕ, ಭಕ್ತಿಭಾವಗಳಿಂದ ಕೊಂಡಾಡುವುದರ ಮೂಲಕ, ತತ್ತ್ವಭಾವವಿಚಾರಗಳನ್ನು ಅನುಷ್ಠಾನಕ್ಕೆ ತರಲು ಯತ್ನಿಸುವುದರ ಮೂಲಕ ತನ್ನ ದಿವ್ಯಧಾಮವನ್ನು ತನ್ನ ನೆಲೆಯನ್ನು ಗಳಿಸಿಕೊಳ್ಳಲಿ ಎಂಬುದು 'ಅವತಾರ'ಗಳ ಮೂಲ ಧ್ಯೇಯ ಎಂದು ಭಾಗವತಾದಿ ಶಾಸ್ತ್ರಗಳು ತಿಳಿಸುತ್ತವೆ. ಹಾಗೆ ಆದ ಅವತಾರಗಳಲ್ಲಿ ಶ್ರೀರಾಮಕೃಷ್ಣ , ಶ್ರೀಮಾತೆ ಶಾರದಾದೇವಿಯವರ ಅವತಾರವೂ ಅಂತರ್ಭವಿಸುತ್ತದೆ.


ಮಾನವನ ಆಧ್ಯಾತ್ಮಿಕ ಉತ್ಕರ್ಷತೆಯ ಸಾಧನೆಗೆ ಅವನ ಭವ್ಯತೆ-ದಿವ್ಯತೆಯ ಪ್ರಾಪ್ತಿಗೆ, ಲೌಕಿಕವಾದ ಬದುಕಿನ ಅಮೂಲ್ಯೀಕರಣಕ್ಕೆ ಶ್ರೀಮಾತೆ ಶಾರದಾದೇವಿಯವರ ಜೀವನಕ್ಕೆ ಸಂಬಂಧಿಸಿದ ಸಾಹಿತ್ಯವೂ ಅನೇಕ ರೀತಿಯಲ್ಲಿ ಮಹೋಪಕಾರಿಯಾಗಿದೆ. ಆದಕಾರಣ ಅವರಿಗೆ ಸಂಬಂಧಿಸಿದ ಸಾಹಿತ್ಯಗಳನ್ನು ಪರಿಚಯಿಸುವುದು ಈ ಲೇಖನದ ಉದ್ದೇಶ.

## ಜೀವನ ಚರಿತ್ರೆ

'ಶ್ರೀಶಾರದಾದೇವಿ' (ಸಚಿತ್ರ) ಮಕ್ಕಳಿಗಾಗಿ. – ನೋಡಿದ ಚಿತ್ರ ಮನಸ್ಸಿನ ಮೇಲೆ ಗಾಢಪರಿಣಾಮ ಮಾಡುವುದು. ಮಕ್ಕಳು ವಿಶೇಷವಾಗಿ ಬಣ್ಣಬಣ್ಣದ ಚಿತ್ರಕ್ಕೆ ಆಕರ್ಷಿತರಾಗುವರು. ಬಾಲ್ಯದಲ್ಲೇ ಮಕ್ಕಳಿಗೆ ಒಂದು ಉದಾತ್ತ ಆದರ್ಶಭಾವದ ಮುದ್ರೆ ಒತ್ತಲು ಈ ಸಣ್ಣ ಪುಸ್ತಿಕೆ ಸಹಾಯಕವಾಗಿದೆ.

ಸ್ವಾಮಿ ಸೋಮನಾಥಾನಂದರ 'ಪತಿತಪಾವನೆ ಶಾರದಾ' 'ಶ್ರೀಶಾರದಾದೇವಿ' ಪ್ರಚಾರೋಪನ್ಯಾಸಮಾಲೆ, 'ಶ್ರೀಶಾರದಾದೇವಿ' (ಸಂಕ್ಷಿಪ್ತ ಜೀವನ ಚರಿತ್ರೆ) 'ಶ್ರೀಮಾತೆ' (ಶ್ರೀಶಾರದಾದೇವಿಯವರ ಜೀವನ) ಈ ಸಣ್ಣ ಪುಸ್ತಿಕೆಗಳು ಸಂಗ್ರಹವಾಗಿ ಶ್ರೀಮಾತೆಯ ಜೀವನ ಚರಿತೆಯನ್ನು ತಿಳಿಸುತ್ತವೆ. ದೊಡ್ಡ ದೊಡ್ಡ ಗ್ರಂಥಗಳನ್ನು ಓದಲು ಸಮಯಾವಕಾಶವಿಲ್ಲದವರಿಗೆ ಇವು ಸಹಾಯಕವಾಗುವುವು. ಅಷ್ಟೇ ಅಲ್ಲದೆ ಶ್ರೀಮಾತೆ ಎಂಬ ಪರಿಚಯವೇ ಇಲ್ಲದವರ ಮನಸ್ಸಿಗೆ ಅವರನ್ನು ಪರಿಚಯಿಸಿ ಅವರ ಜೀವನದಿಂದ ಉದಾತ್ತ ಜೀವನ ನಡೆಸಲು ಸ್ಫೂರ್ತಿ, ಪ್ರೇರಣೆಗಳನ್ನು ನೀಡುತ್ತವೆ.

ಸ್ವಾಮಿ ಹರ್ಷಾನಂದರ 'ಅದ್ಭುತ ಚರಿತೆ ಶಾರದಾಮಾತೆ', ಸ್ವಾಮಿ ಪುರುಷೋತ್ತಮಾನಂದರ 'ಪವಿತ್ರತಾ ಸ್ವರೂಪಿಣಿ ಶ್ರೀ







ಶಾರದಾಮಣಿ', 'ರಾಮಕೃಷ್ಣಗತಪ್ರಾಣಾ' ಇವೂ ಸಣ್ಣ ಹೊತ್ತಿಗೆಗಳೇ ಆಗಿದ್ದರೂ ಶ್ರೀಶಾರದಾದೇವಿಯವರ ಜೀವನದ ಉತ್ಕೃಷ್ಟ ಮಗ್ಗುಲುಗಳನ್ನು ಪರಿಚಯಿಸಿ ಆ ಆದರ್ಶದಲ್ಲಿ ತಮ್ಮ ಬದುಕನ್ನು ಉಜ್ಜೀವನಗೊಳಿಸಿಕೊಳ್ಳಲು ಭಕ್ತನಿಗೆ ಸಾಧಕನಿಗೆ ಪ್ರೇರಕವಾಗಿವೆ. ಸ್ವಾಮಿ ಪವಿತ್ರಾನಂದರ 'ಮಮತೆಯ ಮೂರ್ತಿ ಶ್ರೀಮಾತೆ' - ಶ್ರೀಮಾತೆಯವರ ಅಸಾಮಾನ್ಯ ಹೃದಯವಂತಿಕೆಯನ್ನೂ, ಯಾವ ಜೀವಿಯೂ ತನ್ನ ಪ್ರೀತಿಗೆ ಹೊರತಲ್ಲ ಎಂಬ ವಿಶಾಲಮನೋಭಾವವನ್ನೂ ವಿಶ್ವಕುಟುಂಬಿಯ ಔದಾರ್ಯವನ್ನೂ ಮಾನವರಿಗೆ ಆದರ್ಶವಾಗಿ ಎತ್ತಿ ಹಿಡಿದಿದೆ. ಜೊತೆಯಲ್ಲಿ ಶ್ರೀಮಾತೆಯವರ ಸಂದೇಶಸುಧೆಯನ್ನೂ ಇದು ಸಂಗ್ರಹಿಸಿದೆ.

ಸ್ವಾಮಿ ಸೋಮನಾಥಾನಂದರ 'ಶ್ರೀಶಾರದಾದೇವಿ' ಹಿಂದೂ ಸಂಸ್ಕೃತಿಯಲ್ಲಿ ಸ್ತ್ರೀಯರ ಸ್ಥಾನದಿಂದ ಆರಂಭಿಸಿ ಶ್ರೀಮಾತೆಯವರ ಜನನದಿಂದ ಅವರ ಜೀವನ ಚರಿತ್ರೆಯನ್ನು ಸ್ವಲ್ಪ ವಿಸ್ತಾರವಾಗಿಯೇ ವಿವರಿಸುತ್ತದೆ. ಇದು ಶ್ರೀಮಾತೆಯವರ ಆಪ್ತ ಸಹಚರರಾಗಿದ್ದ ಸ್ವಾಮಿ ಶಾರದಾನಂದ, ಗೋಲಾಪ್ ಮಾ, ಯೋಗಿನ್ ಮಾ, ಲಕ್ಷ್ಮೀದೇವಿ, ಗೌರಿದಾಸಿ ಇವರುಗಳನ್ನು ಪರಿಚಯಿಸಿ, ಶ್ರೀಮಾತೆಯವರ ಸಂಗ್ರಹ ಸಂದೇಶಗಳೊಡನೆ ಉಪಸಂಹಾರಗೊಂಡಿದೆ.

ಕೇವಲ ಪ್ರಕಾಶಕರನ್ನು ಮಾತ್ರ ಹೆಸರಿಸಿರುವ 'ತ್ರಿವೇಣೀ' ಕೃತಿಯು ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದ, ಶ್ರೀಶಾರದಾದೇವೀ ಮೂವರ ಜೀವನವನ್ನೂ ಸಂಗ್ರಹವಾಗಿ ಚಿತ್ರಿಸಿದೆ.




ಸ್ವಾಮಿ ನಿತ್ಯಸ್ಥಾನಂದರ 'ಶ್ರೀಮಾತೆ ಶಾರದಾದೇವಿ' ವಿಸ್ತಾರ ವಾಗಿ ಶ್ರೀಮಾತೆಯವರ ಜೀವನವನ್ನು ಚಿತ್ರಿಸುವ ಬೃಹತ್ಕೃತಿ. ಇದು ಸುಮಾರು ೩೭೦ ಪುಟಗಳ ಮಿತಿ ಹೊಂದಿದೆ. ಶ್ರೀಮಾತೆಯವರ ಆದರ್ಶ ಗೃಹಿಣೀ ಭಾವವನ್ನೂ, ಮಾತೃತ್ವದ ಆದರ್ಶ, ಗುರು ಭಾವಗಳನ್ನೂ ಸವಿವರವಾಗಿ ಇದು ಚಿತ್ರಿಸುತ್ತದೆ. ಈ ಅಧ್ಯಾಯಗಳಲ್ಲಿ ಶ್ರೀಮಾತೆಯ ಆದರ್ಶ ಆಚಾರ ವಿಚಾರಗಳ ಅನುಷ್ಠಾನದೊಡನೆಯೇ ಅಲ್ಲಲ್ಲಿ ಅವರ ಸಂದೇಶಾಮೃತವೂ ಹುದುಗಿದೆ.

ಸ್ವಾಮಿ ಗಂಭೀರಾನಂದರ 'ಶ್ರೀ ಮಾ ಸಾರದಾದೇವೀ' ಎಂಬ ಬಂಗಾಳೀ ಗ್ರಂಥ ಹಾಗೂ ಇನ್ನಿತರ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಸ್ವಾಮಿ ಪ್ರಣವೇಶಾನಂದರು 'ಮಹಾಮಾತೆ ಶ್ರೀ ಸಾರದಾದೇವಿ' ಎಂಬ ಕೃತಿಯನ್ನು ರಚಿಸಿರುವರು. ಶ್ರೀರಾಮಕೃಷ್ಣರು ಜಗತ್ತಿಗೆ ಅರ್ಪಿಸಿದ ಕುಂದುಕೊರತೆಗಳೇ ಇಲ್ಲದ ಅದ್ಭುತ ಆದರ್ಶ ಮಹಾಮಾತೆ. ಧರ್ಮಮಾರ್ಗವನ್ನು ಪುಷ್ಟೀಕರಿಸುವ ಶ್ರೀಮಾತೆಯವರ ಮಾತೃತ್ವ ಮೊದಲಾದ ದೈವೀ ಭಾವದ ಉತ್ಕೃಷ್ಟತೆಯನ್ನೂ, ಸ್ತ್ರೀಜನೋಚಿತವಾದ ಅಕ್ಕ; ಸೊಸೆ, ಒಡತಿ, ಪತ್ನಿ, ಮೊದಲಾದ ಸಂಬಂಧಗಳ ಆದರ್ಶ ಅಭಿವ್ಯಕ್ತಿಯನ್ನೂ, ಚಿತ್ತಮನಸ್ಸುಬುದ್ಧಿಗಳನ್ನು ಸೆಳೆದು ಹಿಡಿದಿಡುವ ಶ್ರೀಮಾತೆಯ ಪವಿತ್ರತಮ ಲೀಲಾವಿಲಾಸಗಳನ್ನೂ, ಸರಳವಾದ ಶೈಲಿಯಲ್ಲಿ ಸುಮಾರು ೫೩೦ ಪುಟಗಳಷ್ಟು ವಿಸ್ತಾರವಾದ ಈ ಮಹಾಕೃತಿಯಲ್ಲಿ ಸ್ವಾಮೀಜಿ ನಿರೂಪಿಸಿದ್ದಾರೆ.

ಸ್ವಾಮಿ ಪುರುಷೋತ್ತಮಾನಂದರ 'ಶ್ರೀಶಾರದಾದೇವಿ ಜೀವನಗಂಗಾ' ಸಣ್ಣ ಅಕ್ಷರಗಳ ಸುಮಾರು ೭೦೦ ಪುಟದ ಮಹಾಕೃತಿ. ಸ್ವಾಮೀಜಿ ಇಲ್ಲಿ ಶ್ರೀಮಾತೆಯವರ ನಡೆಯ ದೈವಿಕತೆಯನ್ನು, ಉತ್ಕೃಷ್ಟತೆಯನ್ನು, ಸಾಮಾನ್ಯ ಮಾನವನ ನಡತೆಗಿಂತ ಹೇಗೆ ಅವು ವಿಭಿನ್ನ ವಿಶಿಷ್ಟ ಎಂಬುದನ್ನು ವಿಸ್ತಾರವಾಗಿ ಚರ್ಚಿಸಿ ಪ್ರತಿಪಾದಿಸಿದ್ದಾರೆ. ಈ ಕೃತಿಯಲ್ಲಿ ಶ್ರೀಮಾತೆಯವರ ಮೇಲು, ಕೀಳು ಇತ್ಯಾದಿ ಭೇದಭಾವವೇ ಅರಿಯದ ಇಡೀ ವಿಶ್ವವನ್ನೇ ತನ್ನ ಮಾತೃತ್ವದ ತೆಕ್ಕೆಯಲ್ಲಿ ಲಾಲಿಸುವ ಮಾತೃಪ್ರೇಮಾಭಿವ್ಯಕ್ತಿಯ ರಸವತ್ತಾದ ಅನೇಕ ಘಟನೆಗಳ ವಿಸ್ತಾರ ವಿವರವನ್ನು ನೋಡಬಹುದು. ಅವರ ಪಾಲಿಗೆ ಯಾವ ಕೆಲಸವೂ ಕೀಳಲ್ಲ. ತಮ್ಮನ್ನು ಉಪಚರಿಸುವ ಅವಕಾಶಕ್ಕಾಗಿ ಕಾತರದಿಂದ ಕಾಯುತ್ತಿದ್ದ ಅನೇಕ ಸಾಧಕ ಭಕ್ತಜನರಿದ್ದಾಗ್ಯೂ ಮಾತೆಯ ಮಾತೃತ್ವ ಎಲ್ಲರ ಸೇವೆಗಾಗಿ ತವಕಪಡುತ್ತಿತ್ತು ಅಂತಹ ಪರಮಾತ್ಮನ ಮಾತೃಶಕ್ತಿಯ ಪ್ರಕಟರೂಪ ಮಹಾಮಾತೆ. ಗುರುವಾಗಿ ಆಕೆ ನಿರ್ವಹಿಸಿದ ಕರ್ತವ್ಯಗಳು, ಸಂಘವನ್ನು ಮುನ್ನಡೆಸಿದ ರೀತಿ ಎಲ್ಲವೂ ಇಲ್ಲಿ ಸವಿಸ್ತಾರವಾಗಿ ನಿರೂಪಿತವಾಗಿವೆ. ಜೊತೆಗೆ ಶ್ರೀಮಾತೆ ಶ್ರೀರಾಮಕೃಷ್ಣರ ಅಭಿನ್ನತೆಯ ಪ್ರತಿಪಾದನೆಯೂ ಇಲ್ಲಿದೆ.




ಶ್ರೀಮಾತೆ ಶಾರದಾದೇವಿಯವರ ೧೫೦ನೇ ಜನ್ಮದಿನದ ಪುಣ್ಯಸ್ಮೃತಿಯ ಪುಸ್ತಿಕೆಗಳಲ್ಲಿ ಒಂದಾದ 'ಸರ್ವವಂದಿತೆ ಶಾರದಾಮಾತೆ' ಶ್ರೀಮಾತೆಯವರ ಬದುಕು ಬೋಧನೆಗಳ ವಿವಿಧ ಮಜಲನ್ನು ನಿರೂಪಿಸುವ ವಿವಿಧ ಲೇಖಕರ ಲೇಖನಗಳನ್ನೊಳಗೊಂಡ ಕೃತಿ. ಅಂತೆಯೇ ಈ ಸಂದರ್ಭದಲ್ಲಿ ಸ್ವಾಮಿ ರಾಘವೇಶಾನಂದರು 'ಶ್ರೀರಾಮಕೃಷ್ಣರ ಸಂನ್ಯಾಸೀ ಶಿಷ್ಯರು ಕಂಡಂತೆ ಶ್ರೀಮಾತೆ' ಎಂಬ ಸಣ್ಣ ಸಂಕಲನ ಕೃತಿಯನ್ನು ರಚಿಸಿರುವರು. ಇದರಲ್ಲಿ ಸ್ವಾಮಿ ವಿವೇಕಾನಂದ,

ಸ್ವಾಮಿ ಬ್ರಹ್ಮಾನಂದ, ಸ್ವಾಮಿ ಶಿವಾನಂದ, ಸ್ವಾಮಿ ಪ್ರೇಮಾನಂದ, ಸ್ವಾಮಿ ಶಾರದಾನಂದ ಮೊದಲಾದ ಭಗವತ್ತತ್ತ್ವಸಾಧಕರು ಬ್ರಹ್ಮಜ್ಞಾನಿಗಳು ತಾಯಿಯಲ್ಲಿ ಕಂಡಿರುವ ದೈವಿಕತೆಯ ವಿವಿಧ ಭಾವಗಳು ಚಿತ್ರೀಕೃತವಾಗಿವೆ. 'ಶ್ರೀಮಾತೆ ಶಾರದಾದೇವಿ ಮತ್ತು ಶ್ರೀ ಶಾರದಾ ಮಠ' ಈ ಪುಟ್ಟ ಪುಸ್ತಿಕೆಯೂ ಇದೇ ಸಂದರ್ಭದಲ್ಲಿ ಪ್ರಕಟಗೊಂಡಿರುವ ಕೃತಿ. ಇದರಲ್ಲಿ ಶ್ರೀಮಾತೆಯವರ ಜೀವನಾದರ್ಶಗಳನ್ನು ತಮ್ಮ ಜೀವನದ ಆದರ್ಶವಾಗಿಸಿಕೊಂಡು ಜೀವನ ನಡೆಸುವ ಸಂಕಲ್ಪ ಹೊತ್ತು ಗೃಹತ್ಯಾಗ ಮಾಡಿ ಬಂದ ಸಂನ್ಯಾಸಿನೀ ಮಾತೆಯರಿಗಾಗಿ ನಿರ್ಮಾಗೊಂಡಿರುವ ಬೆಂಗಳೂರು ನಗರದ ಶ್ರೀ ಶಾರದಾ ಮಠದ ಹುಟ್ಟು ಬೆಳವಣಿಗೆ ವಿಕಾಸಗಳ ಸಂಕ್ಷೇಪ ಚಿತ್ರಣವೂ ಇದೆ. ಇದು ಈ ಕೃತಿಯ ವೈಶಿಷ್ಟ್ಯ.

ಇವೆಲ್ಲಾ ಶ್ರೀರಾಮಕೃಷ್ಣ ಮಠದ ಪ್ರಕಾಶನದ ವ್ಯಾಪ್ತಿಯಲ್ಲಿ ಬಂದ ಕೃತಿಗಳಾದರೆ, ಕೆಲವು ಇತರ ಪ್ರಕಾಶಕರು ಪ್ರಕಟಿಸಿದ ಶ್ರೀಮಾತೆಯವರ ಜೀವನವನ್ನು ಕುರಿತ ಕೃತಿಗಳೂ ನಮ್ಮ ಮನ ಸೆಳೆಯುತ್ತವೆ. ಇದರಲ್ಲಿ ಒಂದು ೧೯೫೫ ನೇ ಇಸವಿಯಲ್ಲೇ ಮಂಜೇಶ್ವರದ ಶ್ರೀ ಗೋವಿಂದ ಪೈ ಅವರ ಮುನ್ನುಡಿಯೊಂದಿಗೆ, ಆ ಕಾಲದ ಪ್ರಸಿದ್ಧ ಕನ್ನಡ ಕವಿ ವಿದ್ವಾಂಸ ಜಿ.ಪಿ. ರಾಜರತ್ನಂ ಅವರ ಪ್ರೇರಣೆಯಿಂದ ರಾ. ನರಸಿಂಹಮೂರ್ತಿಯವರು ರಚಿಸಿದ ಕೃತಿ 'ಶ್ರೀಶಾರದಾದೇವಿ'. ಶ್ರೀಮಾತೆಯವರ ಕಷ್ಟಮಯವಾದ ಹೋರಾಟಮಯದ ಜೀವನಾದ್ಯಂತ ತುಂಬಿದ್ದ ಸಾಧನೆ, ಸಾಕ್ಷಾತ್ಕಾರ, ಕ್ಷಾಂತಿ, ಶಾಂತಿ ಇತ್ಯಾದಿಗಳ ಭಕ್ತಿ ಭಾವ ಮಿಶ್ರಿತ ಚಿತ್ರಣ ಇಲ್ಲಿದೆ. ನಾರೀಮಣಿ ಸಾಧ್ವೀಶಿರೋಮಣಿ ಆದರ್ಶ ಮಹಾಜ್ಞಾನಿ ಆದರ್ಶ ಮಹಾಯೋಗಿನಿಯ ಭವ್ಯ ದಿವ್ಯ ಜೀವನ ೧೦೮ ಪುಟಗಳಲ್ಲೇ ಅತ್ಯದ್ಭುತವಾಗಿ ಮೂಡಿ ಬಂದಿದೆ. ಈ ಪುಸ್ತಕದ ಕೊನೆಯ ಎರಡು ಪುಟಗಳಲ್ಲಿ ಅವರ ಸಂದೇಶಗಳ ಸಂಗ್ರಹವೂ ಇದೆ.

ಮೈಸೂರಿನ ನಜರ್‌ಬಾದಿನ ಕಾಂತಾವಾರ ಪ್ರಕಾಶನದವರು ಪ್ರಕಟಿಸಿರುವ 'ಮಹಾಮಾತೆ ಶ್ರೀ ಶಾರದಾಮಣಿ ದೇವಿ' ಶ್ರೀಯುತ ಜಿ. ವೆಂಕಟಯ್ಯ ಅವರ ಕೃತಿ. ಶ್ರೀ ಕುವೆಂಪು ಅವರ 'ಶ್ರೀರಾಮಕೃಷ್ಣ ಪರಮಹಂಸ' ಕೃತಿಯನ್ನು ಆದರ್ಶವಾಗಿಟ್ಟುಕೊಂಡು ಮದ್ರಾಸ್ (ಈಗಿನ ಚೆನ್ನೈ) ಆಶ್ರಮದ Holy Mother Shree Sharadadevi ಮೊದಲಾದ ಕೃತಿಗಳಿಂದ ಸಂಗ್ರಹಿಸಿ ಈ ಕೃತಿಯನ್ನು ತಾವು ರಚಿಸಿರುವುದಾಗಿ ಕವಿ ಹೇಳಿಕೊಂಡಿದ್ದಾರೆ. ಇದು ೧೯೫೯ರಲ್ಲಿ ಪ್ರಕಟಗೊಂಡಿದೆ.

ಶಿಖರಂ ಕಮಲಾಂಬಾ ಎಂಬುವವರು ತೆಲುಗು ಮೂಲದ ಸ್ವಾಮಿ ಚಿರಂತನಾನಂದರ ಕೃತಿಯನ್ನು 'ಶ್ರೀ ಶಾರದಾದೇವಿಯ ಚರಿತ್ರೆ' ಎಂಬ ಕೃತಿಯಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಇಲ್ಲಿ ಶ್ರೀಮಾತೆಯವರನ್ನು ಮಾತೃದೇವಿ ಎಂದೇ ಕೃತಿಯುದ್ದಕ್ಕೂ ಕರೆಯಲಾಗಿದೆ.

ಬೆಂಗಳೂರಿನ ರಾಜಾಜಿನಗರದ ಸಾಹಿತ್ಯ ನಂದನ ಪ್ರಕಾಶಿಸಿರುವ 'ಕಾರುಣ್ಯನಿಧಿ ಶ್ರೀಮಾತೆ ಶ್ರೀ ಶಾರದಾದೇವಿ' ಎಂಬ ಶ್ರೀಮತಿ ಎ.ಪಿ.ಮಾಲತಿಯವರ ಕೃತಿಯೂ ಶ್ರೀಮಾತೆಯ ಜೀವನವನ್ನು ಚಿತ್ರಿಸುತ್ತದೆ.

ಇನ್ನೂ ಪೂರ್ಣ ಪ್ರಕಟಗೊಳ್ಳದ, 'ವಿವೇಕಪ್ರಭ'ದಲ್ಲಿ ಪ್ರತಿ ತಿಂಗಳೂ ಸರಣಿ ಲೇಖನವಾಗಿ ಶ್ರೀಮಾತೆಯವರ ಸಾನ್ನಿಧ್ಯದ ದಿವ್ಯ ಅನುಭವದ ಅಭಿವ್ಯಕ್ತಿಯಾದ ಅನೇಕ ಸಾಧುಗಳ ಭಕ್ತರ ಸ್ಮೃತಿ ಲೇಖನಗಳೂ ಇವೆ.

ನಮ್ಮದೇ ದೇಶದ ವಿವಿಧ ರಾಜ್ಯಗಳಲ್ಲಿ ಹೊರದೇಶಗಳಲ್ಲಿ ವಾಸಿಸುತ್ತಿರುವ ಭಕ್ತರು ತಾವು ಹೊಂದಿದ ಶ್ರೀಮಾತೆಯ ಕೃಪಾಫಲಾನುಭೂತಿಯನ್ನು ಇನ್ನೂ ಲೇಖನಗಳಲ್ಲಿ ಮೂಡಿಸುತ್ತಲೇ ಇರುವರು.

### ಉಪದೇಶ ಗ್ರಂಥಗಳು

ಶ್ರೀಮಾತೆಯವರ ಜೀವನವೇ ಉಪದೇಶಾತ್ಮಕವಾಗಿದೆ. ಆದರೂ ಅವರು ಸಂದರ್ಭೋಚಿತವಾಗಿ, ಕೆಲವೊಮ್ಮೆ ಭಕ್ತರ ಪ್ರಾರ್ಥನಾನುಸಾರ ಹೇಳಿದ ಅನೇಕ ಸಂದೇಶಗಳೂ ಸಾಧಕರ ಭಕ್ತರ ಉದ್ಧಾರಕ್ಕೆ ಅತ್ಯಂತ ಸಹಕಾರಿಗಳಾಗಿವೆ. ಈ ಕಾರಣದಿಂದ ಅವರ ಸಂದೇಶಗಳನ್ನೇ ಬೇರಯಾಗಿ ಶ್ರೀರಾಮಕೃಷ್ಣ ಆಶ್ರಮ ಪ್ರಕಟಿಸಿದೆ. ಅವುಗಳು ಈ ಕೆಳಗಿನಂತಿವೆ:

ಶ್ರೀಶಾರದಾದೇವಿಯವರ 'ಶ್ರೀನುಡಿ' ಸದಾ ಜೊತೆಯ 'ಕೈಪಿಡಿ'ಯಾಗಿ ಇರಬಹುದಾದ ಅತ್ಯಂತ ಪುಟ್ಟ ಪುಸ್ತಿಕೆ. ಆದರೆ ಅದರಲ್ಲಿರುವ ನೂರಾರು ಉಪದೇಶಗಳಲ್ಲಿ ಒಂದೊಂದೂ ಅತ್ಯಂತ ಅಮೂಲ್ಯವಾದ ರತ್ನ ದಾರಿದೀಪವಾಗಿದೆ. ಇದೇ ಸಾಲಿಗೆ 'ನುಡಿಸಿಂಚನ' ಶ್ರೀಮಾತೆ ಶಾರದಾದೇವಿಯವರ ಉಪದೇಶಗಳ ಸಂಗ್ರಹವೂ ಸೇರುತ್ತದೆ. ಇದು ಸ್ವಾಮಿ ನಿತ್ಯಸ್ಥಾನಂದಜಿಯವರು ಸಂಗ್ರಹ ಮಾಡಿರುವ ಪುಸ್ತಕವಾಗಿದೆ. ಇನ್ನೊಂದು ಕರಪಿಡಿ ಪುಟ್ಟ ಪುಸ್ತಕ 'ಅಮೃತವಾಣಿ' ದಿವ್ಯತ್ರಯರ ಸಂದೇಶಗಳನ್ನು ಸಾರುವುದಾಗಿದೆ. 'ಶ್ರೀ ಶಾರದಾ ಸೂಕ್ತಿ' ಇದು ಅಂಗೈಯಲ್ಲಿ ಹಿಡಿಯಬಹುದಾದ ಪುಟ್ಟ ಕೃತಿ. ಇದರಲ್ಲಿ ಶ್ರೀಮಾತೆಯವರ ಸಂದೇಶಗಳನ್ನು ಆಧ್ಯಾತ್ಮಿಕ ಸಾಧನೆ, ಮನೋನಿಗ್ರಹ, ಸ್ತ್ರೀಯರಿಗೆ ಸಲಹೆ, ಭರವಸೆಯ ನುಡಿ, ಮೊದಲಾದ ಬೇರೆ ಬೇರೆ ಶೀರ್ಷಿಕೆಗಳಡಿ ಸಂಗ್ರಹಿಸಲಾಗಿದೆ. ಇದರಿಂದ ಇದು ಪುಟ್ಟದೇ ಆದರೂ ಯಾವ ವಿಷಯಕ್ಕೆ ಸಂಬಂಧಿಸಿದ ಸಂದೇಶ ಬೇಕೋ ಅದನ್ನು ಆ ಕ್ಷಣ ಓದಿ ಮನಸ್ಸಿಗೆ ತಂದುಕೊಳ್ಳಲು ಸುಲಭವಾಗಿದೆ. ಶ್ರೀಮಾತೆಯವರು ಜಪಕ್ಕೆ ವಿಶೇಷ ಪ್ರಾಧಾನ್ಯ ನೀಡಿದ್ದರು. ತಾವೂ ಕ್ಷಣಬಿಡದೆ ಜಪ ಮಾಡುತ್ತಿದ್ದರು. ಎಲ್ಲರನ್ನೂ ಜಪ ತಪ್ಪದೆ ಮಾಡಬೇಕೆಂದು ಪ್ರೇರೇಪಿಸುತ್ತಿದ್ದರು. ಆ ಹಿನ್ನೆಲೆಯಲ್ಲಿ ಶ್ರೀಮಾತೆಯವರು 'ಜಪ ಮತ್ತು ಧ್ಯಾನ'ದ ಕುರಿತು ಹೇಳಿರುವ ಸಂದೇಶಗಳನ್ನು ಸ್ವಾಮಿ ರಾಘವೇಶಾನಂದರು





ಶ್ರೀಮಾತೆಯವರ ನುಡಿಯಲ್ಲೇ ಸಂಗ್ರಹಿಸಿದ್ದಾರೆ. ಇದೂ ಒಂದು ಕರಪಿಡಿಯ ಪುಸ್ತಕವೇ. ಪ್ರತಿದಿನವನ್ನೂ ಶ್ರೀಮಾತೆಯ ಶುಭನುಡಿಯಿಂದ ಆರಂಭಿಸಲು ಅನುಕೂಲವಾಗುವಂತೆ 'ದಿನಕ್ಕೊಂದು ಅಮೃತಬಿಂದು' ಎಂಬ ಕೃತಿಯನ್ನು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮ ಹೊರತಂದಿದೆ. ಇದು ಶ್ರೀರಾಮಕೃಷ್ಣ ಮಠ ಚೆನ್ನೈ ಪ್ರಕಟಿಸಿದ್ದ 'Dew drops' ಕೃತಿಯ ಕನ್ನಡಾನುವಾದವಾಗಿದೆ.





ಶ್ರೀಮಾತೆ ಶಾರದಾದೇವಿಯರ ೧೫೦ನೆಯ ಜನ್ಮದಿನದ ಪುಣ್ಯ ಸ್ಮೃತಿಯಲ್ಲಿ 'ವಾತ್ಸಲ್ಯತೀರ್ಥ' ಎಂಬ ಶೀರ್ಷಿಕೆಯಲ್ಲಿ ಶ್ರೀಮಾತೆ ಶಾರದಾದೇವಿಯವರ ಸಂದೇಶಗಳು ಸಂಗ್ರಹೀತವಾಗಿವೆ. ಇದನ್ನು ಸಂಗ್ರಹಿಸಿದವರು ಡಾ. ಹೆಚ್.ಎನ್. ಮುರಳೀಧರ ಅವರು. ಇದು ಬೆಂಗಳೂರಿನ ವಿವೇಕಹಂಸ ಪ್ರಕಟಿಸಿರುವ ಹೊತ್ತಿಗೆ. ಇಲ್ಲಿ ಶ್ರೀಮಾತೆಯವರ ಉಪದೇಶಗಳನ್ನು ಜೀವನ-ಜಗತ್ತು, ವಿವೇಕ, ಮನಸ್ಸು, ಜಪ ಮತ್ತು ಧ್ಯಾನ, ತ್ಯಾಗ, ಪ್ರೀತಿ ಮತ್ತು ಕರುಣೆ ಮೊದಲಾದ ವಿಷಯಗಳಡಿಯಲ್ಲಿ ಸಂಗ್ರಹಿಸಲಾಗಿದೆ.

'ಜಗಜ್ಜನನೀ ಶ್ರೀ ಶಾರದಾಮಾತೆ' ಇದೂ ಶ್ರೀಮಾತೆಯವರ ೧೫೦ನೇ ಜನ್ಮದಿನದ ಸ್ಮರಣೆಯಲ್ಲಿ ಪ್ರಕಟಗೊಂಡಿರುವ ಕೃತಿ. ಸುಂದರವಾದ ಬಣ್ಣ ಬಣ್ಣದ ಚಿತ್ರಗಳ ಹಿನ್ನೆಲೆಯಲ್ಲಿ ಇಲ್ಲಿ ಶ್ರೀಮಾತೆಯವರ ಸಂದೇಶಗಳನ್ನು ಪ್ರಕಟಿಸಲಾಗಿದೆ. ಸಂಕಲನಕಾರರು ಸ್ವಾಮಿ ರಾಘವೇಶಾನಂದಜಿ.

ಸ್ವಾಮಿ ಪುರುಷೋತ್ತಮಾನಂದರ 'ಶ್ರೀ ಶಾರದಾದೇವಿ ಸಂದೇಶ ಮಂದಾರ'ವೂ ಶ್ರೀಮಾತೆಯ ಸಂದೇಶಗಳ ಸಂಗ್ರಹವಾಗಿದೆ. ಇದರಲ್ಲಿ ಶಾಂತಿ ಬೇಕೆ, ಆಧ್ಯಾತ್ಮಿಕ ಸಾಧನೆ ಮತ್ತು ಭಗವತ್ಕೃಪೆ, ಸಂಸಾರಚಕ್ರಕ್ಕೆ ಆಸೆಯ ಕೀಲು, ಕರ್ಮದ ಬೀಗಕ್ಕೆ ಕರ್ಮದ ಕೀಲಿಕೈ ಮುಂತಾದ ಉಪಶೀರ್ಷಿಕೆಗಳಿಗೆ ಸಂಬಂಧಿಸಿದ ಸಂದೇಶಗಳಿವೆ. 'ಬಿಡಿ ಹೂಗಳು' ಶೀರ್ಷಿಕೆಯಲ್ಲಿ ವಿಶೇಷವಾಗಿ ಇಂತಹ ವಿಷಯಕ್ಕೇ ಎಂದು ನಿರ್ದೇಶಿಸಲಾಗದಿದ್ದರೂ ಜೀವನದ




ಸುಸೂತ್ರ ಮುನ್ನಡೆಗೆ ಅಗತ್ಯವಾದ ಸಂದೇಶಗಳನ್ನು ಸಂಗ್ರಹಿಸಲಾಗಿದೆ.

'ಶ್ರೀ ಶಾರದಾದೇವಿ ಸಂಭಾಷಣೆ' ಶ್ರೀಮಾತೆ ಹಾಗೂ ಅವರ ಗೃಹಿಣೀ ಭಕ್ತರ, ಸಾಧಕರ ಸಾಧುಗಳ, ಶಿಷ್ಯರ ಸಂಭಾಷಣೆಯ ರೂಪದಲ್ಲಿದೆ. ಇದು ಅವರವರ ವೈಯಕ್ತಿಕ ಪ್ರಶ್ನೆಗೆ ಸಮಾಧಾನ ಹಾಗೂ ಉತ್ತರ ರೂಪದಲ್ಲಿದ್ದರೂ ಆಧ್ಯಾತ್ಮಿಕ ಮಾರ್ಗಾವಲಂಬಿಗಳಿಗೆ ಅತ್ಯಂತ ಉಪಯುಕ್ತವಾಗಿವೆ.

ಬೃಹತ್ಕೃತಿಯಾದ 'ಶ್ರೀಶಾರದಾದೇವಿ ವಚನವೇದ'ವೂ ಭಕ್ತರ ಸಾಧಕರ ಪ್ರಶ್ನೆ ಸಮಸ್ಯೆಗಳಿಗೆ ಶ್ರೀಮಾತೆ ತಿಳಿಸಿರುವ ಸಮಾಧಾನ ಪರಿಹಾರರೂಪದ್ದಾಗಿದೆ. ಬಹೂಪಯೋಗಿಯಾದ ಪುಸ್ತಕವಿದು.

'ವಿವೇಕಪ್ರಭ'ದ ಸ್ವಯಂಸೇವಕರಿಗಾಗಿ 'ದಿನಚರಿ' ಕೆಲವು ವರ್ಷಕಾಲ ಪ್ರಕಟಗೊಳ್ಳುತ್ತಿತ್ತು. ಅವುಗಳಲ್ಲೂ ಶ್ರೀಮಾತೆಯವರ ಅನೇಕ ಸೂಕ್ತಿಗಳು ಉಪಲಭ್ಯವಿದೆ.

ವಿಷಯದ ದೃಷ್ಟಿಯಿಂದ ಈ ಎಲ್ಲ ಗ್ರಂಥಗಳು ಸಮಾನ ರೂಪದಲ್ಲಿವೆ – ಪುಟಸಂಖ್ಯೆಯನ್ನು ಹೊರತುಪಡಿಸಿ. ಆದರೂ ಇವು ವಿವಿಧ ಸ್ತರದ, ವಿಭಿನ್ನ ತಿಳಿವಳಿಕೆಯ ಭಕ್ತರಿಗಾಗಿ, ಭಾವುಕರಿಗಾಗಿ ರಚಿಸಿದ ಗ್ರಂಥಗಳು. ಇವುಗಳಲ್ಲಿ ಪ್ರತಿಯೊಂದೂ ಒಂದಲ್ಲ ಒಂದು ಹೊಸ ಅಂಶವನ್ನು, ಹೊಸ ಚಿಂತನೆಯನ್ನು, ನೂತನ ಭಾವವನ್ನು ಹಾಗೂ ವಿಭಿನ್ನ ಅನುಭೂತಿಯನ್ನು ಸಾಧಕನ ಮನದಂಗಳದಲ್ಲಿ ಬೆಳಗಿಸುವ ಮೂಲಕ ಸಾಹಿತ್ಯಪ್ರಪಂಚದಲ್ಲಿ ತಮ್ಮ ವಿಶಿಷ್ಟ ಸ್ಥಾನವನ್ನು ಕಾಯ್ದುಕೊಂಡಿವೆ.

## ಸಂದೇಶಮೌಲ್ಯ

ಸಮಸ್ಯೆಗಳಿಗೆ ಅದರಲ್ಲಿ ವಿಶೇಷವಾಗಿ ಆಧ್ಯಾತ್ಮಿಕ ಸಮಸ್ಯೆಗಳಿಗೆ ಪರಿಹಾರ ನೀಡಲು ಅಂತಿಂಥವರಿಗೆ ಸುಲಭಸಾಧ್ಯವಲ್ಲ. ಆ ಜೀವನದಲ್ಲಿ ಗಾಢವಾದ ಅನುಭವ ಇಲ್ಲದವರು ಹೇಗೆ ತಾನೆ

ಪರಿಹಾರ ಸೂಚಿಸಬಲ್ಲರು! ಜೀವನದಲ್ಲಿ ಸಂಶಯದ ದುಃಖದ ಸುಳಿಯಲ್ಲಿ ಸಿಲುಕಿ ದಾರಿಗಾಣದೆ ತೀವ್ರಸಂವೇದನೆಗೆ ಒಳಗಾಗಿರುವ ಸನ್ನಿವೇಶಗಳಲ್ಲಿ ಶ್ರೀಮಾತೆಯವರ ಈ ಸಂದೇಶಗಳು ಸಾಧಕರಿಗೆ ಮಾರ್ಗದರ್ಶಕಗಳಾಗಿವೆ. ಶ್ರೀಮಾತೆಯವರ ಸಮಯೋಚಿತ ಸಲಹೆ ಉಪದೇಶಗಳು ಅಮರಸಂದೇಶಗಳು; ಜಗತ್ತಿಗೇ ಬೆಳಕನ್ನು ನೀಡಬಲ್ಲ ವ್ಯಾಪ್ತಿಯನ್ನು ಪಡೆದಿವೆ.

### ಜೀವನಪ್ರವಾಸ

ಶ್ರೀಮಾತೆಯವರ ಪವಿತ್ರತೆ ಕಲ್ಪನಾತೀತವಾದುದು. ಅವರ ಪಾರಲೌಕಿಕ ಪವಿತ್ರತೆಯ ಪರಿಮಳ ಪ್ರತಿ ಜೀವಿಗೆ ಆದರ್ಶ. ಈ ಕಾರಣದಿಂದಲೇ ಅವರು ಪತಿಯಿಂದ ಜಗನ್ಮಾತೆಯ ದಿವ್ಯಪೀಠದಲ್ಲಿ ಪ್ರತಿಷ್ಠಾಪಿಸಲ್ಪಟ್ಟು ಆರಾಧಿಸಲ್ಪಟ್ಟ ಮಹಾಮಾತೆ. ಶ್ರೀಮಾತೆಯವರ ನಿಷ್ಕಲ್ಮಷ ಪ್ರೇಮ, ಪಕ್ಷಪಾತರಹಿತ ಪ್ರೇಮ, ಅನುಕಂಪೆ ಔದಾರ್ಯ ವೈಶಾಲ್ಯಗಳ ಹರವು ಅವರ ಜೀವನಚರಿತೆಯನ್ನು ಓದುತ್ತಾ ಓದುತ್ತಾ ವಿಕಾಸಗೊಳ್ಳುತ್ತಾ ವಿಶಾಲಗೊಳ್ಳುತ್ತಾ ದೈವೀ ಮೂಲದೆಡೆಗೆ ಸಾಗುವ ಅನುಭವ ಪ್ರತಿ ಓದುಗನಿಗೂ ಆಗುತ್ತದೆ. ಅದರಿಂದ ಅವನ ಜೀವನದಲ್ಲಿ ಧನ್ಯತೆ, ಭರವಸೆಗಳು ವ್ಯಕ್ತಿಯ ಜೀವನವನ್ನು ಸಮಗ್ರವಾಗಿ ಆವರಿಸಿಕೊಳ್ಳುತ್ತದೆ. ತನ್ಮೂಲಕ ವ್ಯಕ್ತಿಯು ಶಾಂತಿ, ತೃಪ್ತಿ, ಸಂತೋಷ, ಅಮೃತ, ಆನಂದಗಳನ್ನನುಭವಿಸುತ್ತಾ ಜೀವನವನ್ನು ಸುಲಭವಾಗಿ ನಿರ್ವಹಿಸುವ ಸಾಮರ್ಥ್ಯವನ್ನು ಪಡೆಯುತ್ತಾನೆ.

### ಉಪಸಂಹಾರ

ಇಂತಹ ಪರಮೋಚ್ಚ ಜೀವನಾದರ್ಶ ಭಾವಧಾರೆಯನ್ನು ಸೋತವನಿಗೆ ಆಶಾಕಿರಣವಾಗಿ, ಆಧ್ಯಾತ್ಮಿಕ ಸಾಧಕನಿಗೆ ನವೋತ್ಸಾಹಪ್ರದವಾಗಿ, ಪತಿತನಿಗೆ ಪಾವನತ್ವದಾಯಕವಾಗಿ, ಕುಸಿದವನಿಗೆ ಆಸರೆಯ ಕರಾವಲಂಬವಾಗಿ ಹೃದಯ ಮನ ಬುದ್ಧಿಗಳಿಗೆ ಮುದನೀಡುವ ಚೈತನ್ಯದಾಯಕ, ಬೋಧಪ್ರದ, ಸಾಹಿತ್ಯಧಾರಾ ರೂಪದಲ್ಲಿ ಪ್ರಕಟಿಸುತ್ತಾ ಶ್ರೀರಾಮಕೃಷ್ಣ ಆಶ್ರಮವು ಅತ್ಯಂತ ಲೋಕೋಪಕಾರಿ ಲೋಕೋದ್ಧಾರಕ ಸ್ತುತ್ಯ ಕಾರ್ಯವನ್ನು, ದಿವ್ಯತ್ರಯರ ಕೃಪಾಶೀರ್ವಾದದಿಂದ ನಿರಂತರವಾಗಿ ನೆರವೇರಿಸುತ್ತಾ ಸಾಗಿದೆ. ✽

ನಮ್ಮ ಮಾತು ಯೋಚನೆಗಳಲ್ಲಿ ಸ್ಥಿರತೆ ಇರಬೇಕು. ಮನಸ್ಸು ಒಪ್ಪದುದನ್ನು ಕೇವಲ ಬಾಯಿಂದ ಆಡಿಬಿಟ್ಟರೆ ಪ್ರಯೋಜನವಿಲ್ಲ. ಮನಸ್ಸು ಯೋಚಿಸಿದ್ದನ್ನು ಬಾಯಿಯೂ ಆಡಬೇಕು. ಬಾಯಲ್ಲಿ ಆಡಿದ್ದನ್ನು ಮನಸ್ಸೂ ಯೋಚಿಸಬೇಕು. ಒಮ್ಮೆ ಬಾಯಿಂದ ಆಡಿದ ಮಾತಿಗೆ ಏನೇ ಆದರೂ ತಪ್ಪಬಾರದು. ಯಾರು ಹೀಗೆ ಮಾಡುವರೋ ಅವರಿಗೆ ಎಲ್ಲವೂ ಅನುಕೂಲವಾಗುವುದು.

— ಸ್ವಾಮಿ ತುರೀಯಾನಂದ


HOTEL SHARADA




website: www.hotelsharada.com,
E-mail : hotelsharada@gmail.com

Ph: +91-080-2220 1042, + 91-080-2220 1044

1. Opposite: Bangalore City Railway Station
2. Opposite : Kempegowda Bus - Station (KBS)
3. Opposite : Majestic Metro Interchange Station

# 25/3, Kempegowda Circle,Bangalore - 560 009,
Near Upparpet Police Station